ಈ ದಿನ ದಿಃ19.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಶ್ರೀ ಜೆ.ಹೆಚ್.ಕೆ ವಕೀಲರಿಂದಃ-**

ಆರೋಪಿತನು ನಮ್ಮ ಅಂಗಡಿಗೆ ಎಷ್ಟು ದಿನಗಳ ಅಂತರದ ಮೇಲೆ ಮೊಬೈಲ್ ಖರೀದಿಸಲು ಬರುತ್ತಿದ್ದ ಎಂದರೆ ಸಾಕ್ಷಿಯು ಹೊಸ ಮೊಬೈಲ್ ನಮ್ಮ ಅಂಗಡಿಯಲ್ಲಿ ಬಂದಾಗ ನಾವು ಅವನಿಗೆ ನೀಡುತ್ತಿದ್ದೇವು ಎಂದು ನುಡಿಯುತ್ತಾರೆ. ಆರೋಪಿಯ ಅಂಗಡಿಗೆ ಯಾವ ವರ್ಷದಿಂದ ಮೊಬೈಲ್ ಗಳನ್ನು ಪೂರೈಸುತ್ತಿದ್ದೆನು ಎಂದು ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಅಂಗಡಿಗೆ ಮೊಬೈಲ್ ಪೂರೈಸಿದ ಬಗ್ಗೆ ಲೆಡ್ಜರ್ ಅಕೌಂಟ್‌ಗಳನ್ನು ಇಟ್ಟಿರುತ್ತೇವೆಂದರೆ ಸರಿ. ಆರೋಪಿತನಿಗೆ ಪೂರೈಸಿದ ಮೊಬೈಲ್ ಗಳ ಇನ್‌ವಾಯ್ಸ್ ಪ್ರತಿಗಳನ್ನು ಮತ್ತು ಆರೋಪಿ ಸದರಿ ಮೊಬೈಲ್ ಖರೀದಿಸಿದ್ದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಿದ ಒಟ್ಟು ಹಣದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮಾರ್ಚ್ 2018 ರ ವರೆಗೆ ಆರೋಪಿತನಿಂದ ಬರಬೇಕಾದ ಹಣದ ಮೊತ್ತಕ್ಕೆ ಸಂಬಂಧಿಸಿದಂತೆ ಲೆಡ್ಜರ್ ಅಕೌಂಟನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಮೇಲೆ ಹೇಳಿದ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಸಲ್ಲಿಸಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿಪಿ-2 ರಲ್ಲಿ ಎರಡು ಚೆಕ್ಕುಗಳಿಗೆ ಸಂಬಂಧಿಸಿದಂತೆ ನಮೂದು ಇರುತ್ತದೆ ಎಂದರೆ ಸರಿ. ಆದರೆ ಇನ್ನೊಂದು ಚೆಕ್ಕು ನನಗೆ ಸೇರಿರುವುದಿಲ್ಲ ಎಂದು

ನುಡಿಯುತ್ತಾರೆ. ವ್ಯವಹಾರದ ಸಂದರ್ಭದಲ್ಲಿ 30 ದಿನಗಳ ವರೆಗೆ ಸಂದಾಯ ಮಾಡಲು ಅವಕಾಶ ನೀಡುವ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ವ್ಯವಹಾರ ಮಾಡುವ ಸಂದರ್ಭಗಳಲ್ಲಿ ಭದ್ರತೆಗಾಗಿ ಚೆಕ್ಕನ್ನು ತೆಗೆದುಕೊಳ್ಳುತ್ತೇವೆಂದರೆ ಸರಿ. ಆರೋಪಿತನು ಭದ್ರತೆಗಾಗಿ ನಿಪಿ-1 ಚೆಕ್ಕನ್ನು ನೀಡಿರುತ್ತಾನೆಂದರೆ ಸರಿಯಲ್ಲ. ಆರೋಪಿ ರೂ.50,000 ನಮೂದಿಸಿ ಭದ್ರತೆಗಾಗಿ ಚೆಕ್ಕನ್ನು ನೀಡಿದ್ದು, ನೀವು ಅವನಿಗೆ ಮೋಸ ಮಾಡಲು 50 ಸಾವಿರದ ಹಿಂದೆ 4 ಎಂಬ ಅಂಕಿಯನ್ನು ಸೇರಿಸಿ ರೂ.4,50,000/- ನಮೂದು ಮಾಡಿ ಮೋಸ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತನು ನಮ್ಮ ಅಂಗಡಿಯಲ್ಲಿ ಯಾವುದೇ ಕಾಲಕ್ಕೂ ರೂ.4,50,000/- ಬಾಕಿ ಹಣ ನೀಡುವುದು ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನು ನಮ್ಮ ಅಂಗಡಿಯಲ್ಲಿ ರೂ.4,50,000/- ಬಾಕಿ ಹಣ ನೀಡುವುದು ಇಲ್ಲದೆ ಇರುವುದರಿಂದ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ಪೊಲೀಸರೊಂದಿಗೆ ವಾರೆಂಟನ್ನು ಜಾರಿ ಮಾಡುವ ಸಂದರ್ಭದಲ್ಲಿ ಆರೋಪಿತನಿಂದ ರೂ.50,000/- ಹಣ ಪಡೆದಿರುತ್ತೇವೆಂದರೆ ಸರಿ. ಅಲ್ಲದೆ ರೂ.1,60,000/- ಬೆಲೆಯ ಮೊಬೈಲ್ ಗಳನ್ನು ಪಡೆದುಕೊಂಡು ಹೋಗಿರುತ್ತೇವೆಂದರೆ ಸಾಕ್ಷಿಯು ಸದರಿ ಮೊಬೈಲ್ ಗಳ ಎಂ.ಆರ್.ಪಿ ಬೆಲೆ ಆಗುವಷ್ಟು ತೆಗೆದುಕೊಂಡು ಹೋಗಿರುತ್ತೇವೆ, ಆದರೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಅಷ್ಟು ಬೆಲೆ ಆಗುವುದಿಲ್ಲ ಎಂದು ನುಡಿಯುತ್ತಾರೆ.

ಕಾನೂನು ಬಾಹಿರವಾಗಿ ಆರೋಪಿತನಿಂದ ಹಣ ಮತ್ತು ಮೊಬೈಲಗಳನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ರೂ.50 ಸಾವಿರ ಹಣ ಮತ್ತು ಮೊಬೈಲಗಳನ್ನು ಆರೋಪಿತನಿಂದ ತೆಗೆದುಕೊಂಡ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ

ಹೇಳಿರುತ್ತೇನೆಂದು ನುಡಿಯುತ್ತಾರೆ. ಆರೋಪಿಗೆ ನೋಟಿಸ್ ಮುಟ್ಟಬಾರದು ಎನ್ನುವ ಉದ್ದೇಶದಿಂದ ತಪ್ಪಾದ ವಿಳಾಸಕ್ಕೆ ನೋಟಿಸ್ ಕಳುಹಿಸಿರುತ್ತೇನೆಂದರೆ ಸರಿಯಲ್ಲ.

ಆರೋಪಿತನು ನಮ್ಮ ಅಂಗಡಿಗೆ ಯಾವುದೇ ಹಣ ಬಾಕಿ ನೀಡುವುದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ತೊಂದರೆ ಕೊಡಲು ಆತನ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.